Ref: CE/NSEBSE/NP/15022026 15th February, 2026

To,

Listing Department, National Stock Exchange of India Limited, Exchange Plaza, Bandra Kurla Complex, Bandra (East), Mumbai – 400 051	Department of Corporate Services - Listing BSE Limited, P. J. Towers, Dalal Street, Mumbai – 400 001

Re: Scrip Symbol: CENTUM/ Scrip Code: 517544

Dear Sir/ Madam,

Sub.: Newspaper Publication – Postal Ballot Notice intimation

We are enclosing herewith the extracts of the newspaper publication for completion of dispatch of the Postal Ballot Notices (in electronic form) published on 15th February, 2026 in "Financial Express", (English Newspaper) and "Prajavani" (Kannada Newspaper).

Kindly take the same on your records.

Thanking you,

Yours faithfully,
For **Centum Electronics Limited**

INDU H S
Digitally signed by INDU H S
Date: 2026.02.15 16:00:08 +05'30'

Indu H S
Company Secretary & Compliance Officer
Encl.: a/a

Centum Electronics Limited
44, KHB Industrial Area, Yelahanka New Town, Bangalore - 560 064, Karnataka, India
Tel +91-(0)80-4143-6000 **Fax** +91-(0)80-4143-6005 **Website** www.centumelectronics.com
E-mail info@centumelectronics.com CIN - L85110KA1993PLC013869

ನಗರದಲ್ಲಿ ಇಂದು

ಶಿವರಾತ್ರಿ ವಿಶೇಷ



'ಶಿವ'ನಿಗೆ ಪಂಚಾಮೃತ ರುದ್ರಾಭಿಷೇಕ: ಮಹಾ ಮಂಗಳಾರತಿ, ಅಹೋರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ ಮತ್ತು ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಮೂರನೇ ಹಂತ, ಜೆ.ಪಿ. ನಗರ, ಬೆಳಿಗ್ಗೆ 7ರಿಂದ

ಪ್ರಾಣ ಪ್ರತಿಷ್ಠಾಪನೆ, ವಿಶೇಷ ಪೂಜೆ, ಬೆಳಿಗ್ಗೆ 8ರಿಂದ ರುದ್ರಾಭಿಷೇಕ, ರುದ್ರಪಾರಾಯಣ, ಹೋಮ-ಹವನ ಹಾಗೂ ವಿಶೇಷ ಅಲಂಕಾರಗಳು, ಸಂಜೆ 5ಕ್ಕೆ ಮಹಾಲಿಂಗೇಶ್ವರ ಉತ್ಸವ ಬಲಿ, 6.30ಕ್ಕೆ ರಥೋತ್ಸವ, ಶಿವರಾತ್ರಿ ಜಾಗರಣೆಯ ಅಂಗವಾಗಿ ಸಂಜೆ 6ಕ್ಕೆ ಪ್ರಥಮ ಯಾಮ, ರಾತ್ರಿ 9ಕ್ಕೆ ದ್ವಿತೀಯ ಯಾಮ, 12 ಗಂಟೆಗೆ ತೃತೀಯ ಯಾಮ ಮತ್ತು ಬೆಳಗಿನ ಜಾವ 3ಕ್ಕೆ ಚತುರ್ಥ ಯಾಮ ಪೂಜೆ, ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ, ನೃತ್ಯಪದ ಜಾಗರಣೆ, ಗಾನಪದ ಜಾಗರಣೆ, ಜಾನಪದ ಜಾಗರಣೆ ಎಂಬ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ:ಮಹಾಲಿಂಗೇಶ್ವರ ಸೇವಾ ಟ್ರಸ್ಟ್, ಸ್ಥಳ:ಶಿಶುಗೃಹ ಆಟದ ಮೈದಾನ,ಮೂರನೇ ಹಂತ, ಎಚ್‌ಎಎಲ್.

ಗೌರೀಶ್ವ ಸ್ವಾಮಿಗೆ ವಿಶೇಷ ರುದ್ರಾಭಿಷೇಕ: ವಿಶೇಷ ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಗೌರೀಶ್ವರ ದೇವಸ್ಥಾನ, ಶ್ರೀರಾಮ ಲೇಔಟ್, ಜ್ಞಾನಜ್ಯೋತಿನಗರ, ಮಲ್ಲತ್ತಹಳ್ಳಿ, ಬೆಳಿಗ್ಗೆ 9ರಿಂದ

'ನಾದ ನಾಟ್ಯಾಂಜಲಿ ಅಹೋರಾತ್ರಿ ಶಿವರಾತ್ರಿ' ಸಂಗೀತ ನೃತ್ಯೋತ್ಸವ: ಉಪಸ್ಥಿತಿ: ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಉದಯ್ ಬಿ. ಗರುಡಾಚಾರ್, ಶಾಲಿನಿ ರಜನೀಶ್, ಬಿ.ಆರ್. ಶ್ರೀಧರ್, ಎ.ವಿ. ಸತ್ಯನಾರಾಯಣ, 'ಸೃಷ್ಟಿ ತಾಂಡಪ್ರಿಯ ರಾಷ್ಟ್ರೀಯ ಪ್ರಶಸ್ತಿ ಪ್ರದಾನ: ರಾಧಾ ಶ್ರೀಧರ್, ವೈಜಯಂತಿ ಕಾಶಿ, ಶುಭಾ ಧನಂಜಯ, ಆಯೋಜನೆ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ: ಶೃಂಗೇರಿ ಶಂಕರ ಮಠ, ಶಂಕರಪುರ, ಸಂಜೆ 5ರಿಂದ

ಶಿವರಾತ್ರಿ: ಗಣಹೋಮ, ನವಗ್ರಹ ಹೋಮ, ರುದ್ರಹೋಮ, ಶಾಂತಿ ಹೋಮ, ಸ್ವಾಮಿಗೆ ಪಂಚಾಮೃತ ಅಭಿಷೇಕ ಅಲಂಕಾರ, ತೀರ್ಥ ಪ್ರಸಾದ ವಿನಿಯೋಗ, ಭಜನೆ: ಸಾಯಿಚಂದ್ರ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀ ಜ್ಞಾನ ಮುನೇಶ್ವರ ಸ್ವಾಮಿ ದೇವಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಸಂಜೆ 5ರಿಂದ

ಮಹಾಶಿವರಾತ್ರಿ ಪೂಜೆ: ನದೀಶ್ವರಸ್ವಾಮಿಗೆ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಆಯೋಜನೆ ಮತ್ತು ಸ್ಥಳ: ನಂದೀಶ್ವರಸ್ವಾಮಿ ದೇವಸ್ಥಾನ, ಕೆಂಚನಪುರ ಕ್ರಾಸ್, ಜಗಜ್ಯೋತಿ ಬಡಾವಣೆ, ಜ್ಞಾನಭಾರತಿ, ಸಂಜೆ 6ರಿಂದ

ಮಹಾಶಿವರಾತ್ರಿ ನಾಟ್ಯ ಸಂಗಮ: ನೃತ್ಯ, ಹಾಡು, ಸಂಗೀತ, ಸಿನಿಮಾ ವೀಕ್ಷಣೆಯೊಂದಿಗೆ, ಆಯೋಜನೆ: ಅರಳಿಕಟ್ಟೆ ಲಕ್ಷ್ಮೀಪುರ, ಸ್ಥಳ: ಎಚ್ಚಮನಾಯಕ ರಸ್ತೆ, ಲಕ್ಷ್ಮೀಪುರ, | ಸಂಜೆ 6ರಿಂದ

ಶಿವರಾತ್ರಿ ರಂಗಸಂಗಮ: 'ಮಹಾಯುಗ' ನಾಟಕ ಪ್ರದರ್ಶನ, ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6ರಿಂದ

ಮಹಾಶಿವರಾತ್ರಿ ಅಂಗವಾಗಿ ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಸಂಜೆ 6ರಿಂದ

'ಕಾವ್ಯ ಶಿವರಾತ್ರಿ' ಅಹೋರಾತ್ರಿ ಕಾವ್ಯ ಗಾಯನ: ಕವಿಗೋಷ್ಠಿಗೆ ಚಾಲನೆ: ಎಚ್. ಲಕ್ಷ್ಮೀನಾರಾಯಣಸ್ವಾಮಿ, ಅಧ್ಯಕ್ಷತೆ: ಚಲಂ ಹಾಡ್ಲಹಳ್ಳಿ, ಉದ್ಘಾಟನೆ: ಟಿ. ವೆಂಕಟೇಶಮೂರ್ತಿ, 'ಕಿರಂ ಕಾವ್ಯ ಶಿವರಾತ್ರಿ ಪುರಸ್ಕಾರ' ಪ್ರದಾನ: ಪ.ಸ. ಕುಮಾರ್, ಪುರಸ್ಕಾರ ಸ್ವೀಕರಿಸುವವರು: ಶೃತಿ ಶಿಲ್ಪಿ ಏಕತಾರಿ ರಾಮಯ್ಯ, ಅಧ್ಯಕ್ಷತೆ: ಎಸ್. ಎಂ. ಜಯಕರ, ಅತಿಥಿಗಳು: ಶಾಂತಲಾ ಕೆ.ಟಿ., ಸಿ.ಎಸ್. ಕರಿಗಾರ್, ಕೆ. ಷರೀಫಾ, ಗಂಗರಾಜು, ಮಹದೇವ ನಾಯಕ್, ಕೆ.ಎನ್. ಸಹನ, ಕೆ.ಎನ್. ಕವನ, ಕೆ.ಎನ್. ಚಂದನ, ಆಯೋಜನೆ: ಜನಸಂಸ್ಕೃತಿ ಪ್ರತಿಷ್ಠಾನ, ಕಾವ್ಯಮಂಡಲ, ಸ್ನಾತಕೋತ್ತರ ಕೇಂದ್ರ ರಾಮನಗರ, ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಡಾ.ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಸಂಜೆ 6ರಿಂದ

ದಾಸರ ಪದಗಳ ಗಾಯನ: ಕೆ.ಪಿ. ಶಿಶಿರ್, ಆಯೋಜನೆ ಮತ್ತು ಸ್ಥಳ: ವ್ಯಾಸರಾಜ ಮಠ, ರಾಜಾಜಿನಗರ ಎರಡನೇ ಹಂತ, ಸುಬ್ರಹ್ಮಣ್ಯನಗರ, ಸಂಜೆ 6

ದಾಸವಾಣಿ: ಗಾಯನ: ಸಂಧ್ಯಾ ಶ್ರೀನಾಥ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ತ್ಯಾಗರಾಜನಗರ, ಸಂಜೆ 6

ಶ್ರೀಶ್ರೀ ರವಿಶಂಕರ್ ಗುರೂಜಿ ಅವರೊಂದಿಗೆ ಮಹಾಶಿವರಾತ್ರಿ ಮಹೋತ್ಸವ: ರುದ್ರ ಪೂಜೆ, ಉತ್ಸವ ಮತ್ತು ಮಧ್ಯರಾತ್ರಿಯ ಧ್ಯಾನ, ಭಜನೆ, ಮಹಾರುದ್ರ ಪೂಜೆ, ಭಜನೆ, ಗುರುದೇವರ ಪ್ರವಚನ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಸಂಜೆ 7.15ರಿಂದ

'ಬೇಡರ ಕಣ್ಣಪ್ಪ, ಶ್ವೇತಕುಮಾರ ಚರಿತ್ರೆ' ಯಕ್ಷಗಾನ ಪ್ರದರ್ಶನ: ಆಯೋಜನೆ: ಬ್ರಹ್ಮಶ್ರೀ ಕಲಾವೇದಿಕೆ, ಸ್ಥಳ: ಮುನೇಶ್ವರ ದೇವಸ್ಥಾನ, ಚನ್ನಸಂದ್ರ, ರಾತ್ರಿ 9ರಿಂದ

'ಶ್ರೀಕೃಷ್ಣಸಂಧಾನ' ನಾಟಕ ಪ್ರದರ್ಶನ: ಉದ್ಘಾಟನೆ: ಎಂ. ಆನಂದ್, ಅಧ್ಯಕ್ಷತೆ: ಎಲ್. ಜಯಸಿಂಹ, ಅತಿಥಿಗಳು: ಮುನಿ ಚನ್ನಪ್ಪ, ಕೃಷ್ಣಪ್ಪ, ಎಂ. ಶಿವಣ್ಣ, ಕಾಂತಮ್ಮ, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಈಶ್ವರ ದೇವಸ್ಥಾನದ ಹತ್ತಿರ, ನಾಗಶೆಟ್ಟಹಳ್ಳಿ, ರಾತ್ರಿ 9.30ರಿಂದ

ಭರತನಾಟ್ಯ ಸ್ಪರ್ಧೆ: ಉದ್ಘಾಟನೆ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10ರಿಂದ

ಕರ್ತವ್ಯ ಪ್ರತಿಷ್ಠಾನದ ಉದ್ಘಾಟನೆ, ಕರ್ತವ್ಯ ಪಥ ಪುಸ್ತಕ ಬಿಡುಗಡೆ: ರಾಜೇಶ್ ಎಲ್.ವೈ., ಉದ್ಘಾಟನೆ: ಗಜೇಂದ್ರ, ಅಧ್ಯಕ್ಷತೆ: ಆಂಟೋನಿ ಸಜೀತ್, ಅತಿಥಿಗಳು: ರಾಜೇಶ್ ಕುಮಾರ್ ಕಲ್ರಾ, ಶಂಕರ್ ನಥನ್, ಗಣೇಶ್ ರಾವ್, ಶ್ರೀನಿವಾಸನ್, ಕೆ.ಎಸ್. ಮಂಜು, ಪ್ರಶಾಂತ್ ವಿಟ್ಲ, ವಿಜಯ್ ವಿಕ್ರಂ ಆಚಿ, ವಿನೋದ್, ಜಯಶ್ರೀ ಮಾಧವ ರಟ್ಟಿಹಳ್ಳಿ, ಆಯೋಜನೆ: ಕರ್ತವ್ಯ ಪ್ರತಿಷ್ಠಾನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ಇರ್ಷಾದ್ ಉಪ್ಪಿನಂಗಡಿ ಅವರ 'ಕರಾವಳಿಯ ರಕ್ತ-ಕಣ್ಣೀರು' ಪುಸ್ತಕ ಬಿಡುಗಡೆ: ಅತಿಥಿಗಳು: ಪ್ರಿಯಾಂಕ್ ಖರ್ಗೆ, ಕಿಶೋರ್ ಕುಮಾರ್, ದಿನೇಶ್ ಅಮೀನ್‌ಮಟ್ಟು, ಮುನೀರ್ ಕಾಟಿಪಳ್ಳ, ಉಪಸ್ಥಿತಿ: ಅಕ್ಷತಾ ಹುಂಚದಕಟ್ಟೆ, ಆಯೋಜನೆ: ಅಹರ್ನಿಶಿ ಪ್ರಕಾಶನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಸಿರಿಮೂರ್ತಿ ಕಾಸರವಳ್ಳಿ (ಶ್ರೀಲಕ್ಷ್ಮಿ ಕೆ.) ಅವರ 'ಭಾವನೆಲೆ' ಪುಸ್ತಕ ಬಿಡುಗಡೆ: ಕೆ.ಎನ್. ಗಣೇಶಯ್ಯ, ಅತಿಥಿ: ಶಂಕರನಾರಾಯಣ ಕೊರ್ಗಿ, ಅಧ್ಯಕ್ಷತೆ: ಟಿ.ಎಸ್. ಸತ್ಯವತಿ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಮಧ್ಯಾಹ್ನ 3ರಿಂದ



ಮಾಸ್ಟರ್ ಹಿರಣ್ಣಯ್ಯ

ಮಾಸ್ಟರ್ ಹಿರಣ್ಣಯ್ಯ ಅವರ ಜಯಂತಿ ಅಂಗವಾಗಿ 'ನಾಟಕವ ನೋಡು ಬ್ರಹ್ಮಾಂಡ ರಂಗಸ್ಥಳದಿ' ಉಪನ್ಯಾಸ: ಎಸ್. ಸೂರ್ಯಪ್ರಕಾಶ್ ಪಂಡಿತ್, ಆಯೋಜನೆ: ಸುಚಿತ್ರ, ಸ್ಥಳ: ಸುಚಿತ್ರ ಸಭಾಂಗಣ, ಒಂಬತ್ತನೇ ಮುಖ್ಯರಸ್ತೆ, ಬನಶಂಕರಿ, ಬೆಳಿಗ್ಗೆ 10

ಸ್ವರ ಉತ್ಸವ: ಸಂತೂರ್ ವಾದನ: ಶಶಾಂಕ ಗೋಖಲೆ, ಗಾಯನ: ಸಂಜೀವ ಅಭ್ಯಂಕರ, ತಬಲಾ: ಅಜಿಂಕ್ಯಾ ಜೋಶಿ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಸಪ್ತಕ, ಮಿತ್ರಾ ಫೌಂಡೇಷನ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5ರಿಂದ

ಬರಗೂರು ರಾಮಚಂದ್ರಪ್ಪ

ಹನೂರು ಚನ್ನಪ್ಪ ಅವರ 'ಕಬ್ಬಿಣದ ಕುದುರೆಗಳು' ಪುಸ್ತಕ ಬಿಡುಗಡೆ: ಕೆ.ಎ. ದಯಾನಂದ, ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿ: ನೆಲ್ಲುಕುಂಟೆ ವೆಂಕಟೇಶಯ್ಯ, ಪುಸ್ತಕದ ಕುರಿತು: ರಘುನಾಥ ಚ.ಹ., ಅಧ್ಯಕ್ಷತೆ: ಎಲ್. ಎನ್. ಮುಕುಂದರಾಜ್, ಆಯೋಜನೆ: ಜೋಳಿಗೆ ಪ್ರಕಾಶನ, ಸ್ಥಳ: ಡಾ.ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 11

ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ ಅಭಿನಂದನಾ ಗ್ರಂಥದ ಲೋಕಾರ್ಪಣೆ, ಸಾವಯವ ಸಂತೆ, ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತು ಪ್ರದರ್ಶನ, ಉಚಿತ ಆರೋಗ್ಯ ಶಿಬಿರ, ಸರ್ವ ಜನಾಂಗದ ವಧು-ವರರ ಮುಖಾ-ಮುಖಿ, ಮಲೆನಾಡು ಗಿಡ್ಡಗಳ ಉಚಿತ ವಿತರಣೆಯ ಸಮಾರೋಪ ಸಮಾರಂಭ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಕೃಷ್ಣ ಯಾದವನಂದ ಸ್ವಾಮೀಜಿ, ಪುರುಷೋತ್ತಮನಂದನಾಥ ಸ್ವಾಮೀಜಿ, ನಾದನಂದನಾಥ ಸ್ವಾಮೀಜಿ, ರಂಗನಾಥ ಸ್ವಾಮೀಜಿ, ಉದ್ಘಾಟನೆ: ಆರ್. ಅಶೋಕ, ಶೋಭಾ ಕರಂದ್ಲಾಜೆ, 'ಕಂದಾಯ ಕಳಕಳಿ ಆವೃತ್ತಿ-2' ಬಿಡುಗಡೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಡಾ.ಸಿ.ಎನ್. ಮಂಜುನಾಥ್, ಆಯೋಜನೆ: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಒಕ್ಕಲಿಗ ಯುವ ಬ್ರಿಗೇಡ್, ಸ್ಥಳ: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆವರಣ, ಕೆಂಗೇರಿ, ಸಂಜೆ 5ರಿಂದ

ಸಂತ ಸೇವಾಲಾಲ್ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅತಿಥಿಗಳು: ರುದ್ರಪ್ಪ ಲಮಾಣಿ, ಎನ್ ಜಯದೇವ ನಾಯಕ್, ಕಾಂತಾ ನಾಯಕ್, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6ರಿಂದ

'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ: ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ ತಂಡ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪ್ರೊ.ಎಂಪಿಎಲ್ ಶಾಸ್ತ್ರಿ ಸಂಗೀತೋತ್ಸವ: 'ಸಂಗೀತ ಕಲಾ ಭೂಷಣ' ಪ್ರಶಸ್ತಿ ಪ್ರದಾನ: ಟಿ.ಟಿ. ಶ್ರೀನಿವಾಸನ್, ಅತಿಥಿಗಳು: ವಿ. ಶ್ರಿಶಾನಂದ, ಅಧ್ಯಕ್ಷತೆ: ಮೈಸೂರು ನಾಗಮಣಿ ಶ್ರೀನಾಥ್, ಸಂಗೀತ ಕಛೇರಿ: ಗಾಯನ: ಎಸ್. ಶಂಕರ್, ಎಸ್. ರಮಣಿ, ಪಿಟೀಲು: ನಳಿನಾ ಮೋಹನ್, ಮೃದಂಗ: ಅರ್ಜುನ್ ಕುಮಾರ್, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಕಾಲೇಜು, ಪ್ರೊ.ಎಂಪಿಎಲ್ ಶಾಸ್ತ್ರಿ ರಸ್ತೆ, ಮಲ್ಲೇಶ್ವರ, ಸಂಜೆ 6ರಿಂದ

ವಿದ್ಯಾರಣ್ಯಪುರದಲ್ಲಿ 'ಮಹಾಶಿವೋತ್ಸವ'

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ವಿದ್ಯಾರಣ್ಯಪುರದ ಎನ್‌ಟಿಐ ಮೈದಾನದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ 'ಮಹಾಶಿವೋತ್ಸವ' ಶೀರ್ಷಿಕೆಯಡಿ ಭಾನುವಾರ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಆಯೋಜಕ ಮೀನಾಕ್ಷಿ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು, ಕೆಬಿಜಿ ಸ್ವಯಂಸೇವಕರ ಸಂಘದ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಭಾನುವಾರ ಬೆಳಿಗ್ಗೆ 10 ಗಂಟೆಗೆ ಶಿವಲಿಂಗಪೂಜೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದ್ದು, ದಿನವಿಡೀ ಪ್ರಸಾದ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ. ಕರಕುಶಲ ವಸ್ತುಗಳೂ ಸೇರಿ 50ಕ್ಕೂ ಹೆಚ್ಚು ವಿವಿಧ ಮಳಿಗೆಗಳು ಇರಲಿವೆ. ಮಧ್ಯಾಹ್ನ 3 ಗಂಟೆಗೆ ಸ್ಥಳೀಯ ಕಲಾವಿದರಿಗಾಗಿ ಶಾಸ್ತ್ರೀಯ ನೃತ್ಯ ಸ್ಪರ್ಧೆ, ಸಂಜೆ 6 ಗಂಟೆಗೆ ರುದ್ರವೀಣೆ ಪಾರಾಯಣ ಹಾಗೂ 6.30ಕ್ಕೆ ದೃಷ್ಟಿ ಆರ್ಟ್ ಸೆಂಟರ್ ವತಿಯಿಂದ 'ಸತ್ಯಂ ಶಿವಂ ಸುಂದರಂ' ಎಂಬ ನೃತ್ಯರೂಪಕ ನಾಟಕ ಪ್ರದರ್ಶನ ನಡೆಯಲಿದೆ. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಕುವೆಂಪು ಮನೆ ದಕ್ಷಿಣ ಭಾರತದ ಶಾಂತಿನಿಕೇತನ: ಹಂ.ಪ. ನಾಗರಾಜಯ್ಯ

ಪ್ರಜಾವಾಣಿ ವಾರ್ತೆ



ಹಂ.ಪ. ನಾಗರಾಜಯ್ಯ

ಬೆಂಗಳೂರು: 'ಕುಪ್ಪಳ್ಳಿಯಲ್ಲಿರುವ ಕುವೆಂಪು ಅವರ ಮನೆ ದಕ್ಷಿಣ ಭಾರತದ ಶಾಂತಿನಿಕೇತನವಾಗಿದೆ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಹೇಳಿದರು.

ಟೋಟಲ್ ಕನ್ನಡ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಮಪ್ರಸಾದ್ ಮಿಟ್ಟೂರು ಅವರ ರಸ ಋಷಿಗೆ ಕಾವ್ಯ ನಮನ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಪ್ರತಿವರ್ಷ ಕುಪ್ಪಳ್ಳಿಯ ಕವಿಶೈಲಕ್ಕೆ ಸುಮಾರು 2.35 ಲಕ್ಷ ಜನ ಭೇಟಿ ನೀಡುತ್ತಾರೆ. ಕುವೆಂಪು ಅವರ ಕುರಿತು ಹಲವಾರು ಲೇಖನಗಳು, ಬರಹಗಳು, ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ' ಎಂದು ತಿಳಿಸಿದರು.

'ಕುವೆಂಪು ಅವರು ಮಹಾತ್ಮ ಗಾಂಧೀಜಿ ಅವರನ್ನು ಸುಂದರ ಕವಿತೆಗಳ ಮೂಲಕ ಸಾಕ್ಷಾತ್ಕಾರ ಮಾಡಿದ್ದಾರೆ. ರಾಮಪ್ರಸಾದ್ ಅವರು ಕುವೆಂಪು ಸಮಗ್ರ ಸಾಹಿತ್ಯವನ್ನು ಅಧ್ಯಯನ ಮಾಡಿ, ಅದಕ್ಕೆ ಕವಿತೆಗಳ ರೂಪ ನೀಡಿದ್ದಾರೆ' ಎಂದು ಹೇಳಿದರು.

ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ್ ಮಾತನಾಡಿ, 'ಕುವೆಂಪು ಅವರಂತೆ ನಿಷ್ಠುರವಾಗಿ ಮಾತನಾಡುವ ಲೇಖಕರ ಸಂಖ್ಯೆ ಕಡಿಮೆ ಆಗಿದೆ. ಅವರ ವೈಜ್ಞಾನಿಕ ಚಿಂತನೆ, ವೈಚಾರಿಕ ದೃಷ್ಟಿಕೋನದ ಕಾರಣ ಅವರು ನಮಗೆ ಆದರ್ಶವಾಗಿದ್ದಾರೆ. ರಾಮಪ್ರಸಾದ್ ಅವರು ರಸಋಷಿಗೆ ಕಾವ್ಯ ನಮನ ಸಲ್ಲಿಸಿರುವುದು ಶ್ಲಾಘನೀಯ' ಎಂದು ತಿಳಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಗಾಯಕಿ ಎಚ್.ಆರ್. ಲೀಲಾವತಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಉಪಸ್ಥಿತರಿದ್ದರು.

ಭದ್ರತಾ ಸಿಬ್ಬಂದಿ ಮನೆಯಲ್ಲಿ ಕಳ್ಳತನ

ಬೆಂಗಳೂರು: ನಕಲಿ ಆಭರಣ ಮಾರಾಟ ಮಾಡುವ ನೆಪದಲ್ಲಿ ಆರು ಮಹಿಳೆಯರ ತಂಡವು ಯಶವಂತಪುರದ ವಸತಿ ಸಮುಚ್ಚಯದಲ್ಲಿ ನೇಪಾಳದ ಭದ್ರತಾ ಸಿಬ್ಬಂದಿ ಮನೆಯಲ್ಲಿ ₹20 ಸಾವಿರ ನಗದು ಹಾಗೂ ಚಿನ್ನಾಭರಣ ಕಳವು ಮಾಡಿ, ಪರಾರಿಯಾಗಿದೆ.

ಯಶವಂತಪುರ ಪ್ರದೇಶದ ಗೋಲ್ಡನ್ ಅಪಾರ್ಟ್‌ಮೆಂಟ್‌ನಲ್ಲಿ ಈ ಘಟನೆ ನಡೆದಿದೆ. ನೆಲ ಮಹಡಿಯಲ್ಲಿರುವ ಭದ್ರತಾ ಸಿಬ್ಬಂದಿ ಮನೆಗೆ ನುಗ್ಗಿ ನಗದು, ಚಿನ್ನಾಭರಣಗಳನ್ನು ಕಳವು ಮಾಡಲಾಗಿದೆ. ಈ ಘಟನೆಯ ದೃಶ್ಯಾವಳಿಗಳು ಅಪಾರ್ಟ್‌ಮೆಂಟ್‌ನ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ. ಇದರ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಬಂಧನಕ್ಕಾಗಿ ಶೋಧ ಆರಂಭಿಸಿದ್ದಾರೆ.